# ಕಸ್ತೂರ್ಬಾ v/s ಗಾಂಧಿ



■ ಬರಗೂರು ರಾಮಚಂದ್ರಪ್ಪ
ಕಲೆ: ಮನೋಹರ ಕೆ. ಆಚಾರ್ಯ

## ಸಂಘರ್ಷದ ನಡುವೆ ಮಾಗಿದ ದಾಂಪತ್ಯ

‘ಹೆಂಗಸ್ರು ವಿದ್ಯಾವಂತರಾಗ್ಬೇಕು’ ಎನ್ನುವ ಗಾಂಧಿ ಮಾತಿಗೆ, ‘ಇಷ್ಟೆಲ್ಲ ಹೇಳ್ತೀರಲ್ಲ, ಸತಿ ಸಾವಿತ್ರಿ, ಸತಿ ಅನಸೂಯ, ಸೀತಾದೇವಿ, ಚಂದ್ರಮತಿ, ದಮಯಂತಿ, ಇವ್ರೆಲ್ಲ ಅವ್ರವ್ರ ಗಂಡಂದ್ರಿಂದ ಪಾಠ ಹೇಳಿಸ್ಕಂಡು ಓದು ಬರಹ ಕಲ್ತಿದ್ರ? ನಿಮ್ ಹಾಗೆ ಕಾಲೇಜ್‌ಗೆ ಹೋಗಿದ್ರ?’ ಎಂದು ಕಸ್ತೂರ್ ಮುಗ್ಧವಾಗಿ ಕೇಳಿದ ಪ್ರಶ್ನೆಗೆ ಗಾಂಧಿಗೆ ಸಿಟ್ಟು ಬಂತು. ಆದರೂ ತಡೆದುಕೊಂಡು ಹೇಳಿದರು; ‘ಅದೇ ಬೇರೆಕಾಲ; ಇದೇ ಬೇರೆಕಾಲ. ನಮಗೆ ಅನುಭವದ ವಿದ್ಯೇನೂ ಬೇಕು; ಅಕ್ಷರವಿದ್ಯೇನೂ ಬೇಕು.’

‘ಈ ಮನೇಲಿ ಬೇರೆ ತರಾ ಹೆಂಗಸಾಗೋಕ್ ನಂಗಿಷ್ಟ ಇಲ್ಲ’ ಎಂದು ಮತ್ತೆ ಕಸ್ತೂರ್ ಹೇಳಿದಾಗ, ಗಾಂಧಿ – ಇನ್ನು ಒತ್ತಾಯಿಸಿ ಪ್ರಯೋಜನವಿಲ್ಲ ಎಂದು ಸುಮ್ಮನಾದರು.

ಆದರೆ ಕಾಲೇಜಿನಿಂದ ಬಂದ ಕೂಡಲೇ ಕಸ್ತೂರರನ್ನು ನೋಡುವ ತವಕ ತಣ್ಣಗಾಗಿರಲಿಲ್ಲ. ಅದು ತವಕ ಮಾತ್ರವಾಗಿರಲಿಲ್ಲ ಎಂಬುದೇ ವಿಶೇಷ! ಪತ್ನಿ ಸದಾ ತನ್ನ ಕಣ್ಗಾವಲಿನಲ್ಲೇ ಇರಬೇಕೆಂಬ ಆಗ್ರಹವೂ ಅದರಲ್ಲಿತ್ತು. ಈ ಕಾರಣಕ್ಕೆ ತಾಯಿಯ ಜೊತೆ ಸಣ್ಣ ಪ್ರಮಾಣದ ಚಕಮಕಿಯೂ ನಡೆದು ಹೋಯಿತು.

ಸಮಲ್ದಾರ್ ಕಾಲೇಜಿನಿಂದ ಸಂಜೆ ಬಂದವರೇ ‘ಕಸ್ತೂರ’ ಎಂದು ಕೂಗಿದರು ಗಾಂಧಿ; ಕಸ್ತೂರ್ ಇರಲಿಲ್ಲ. ತಾಯಿ ಪುತಳಿಬಾಯಿ ಬಂದು ‘ಇಲ್ಲೇ ಗೆಳತಿ ಮನೇಗ್ ಹೋಗಿದಾಳೆ’ ಎಂದರು.

‘ನೀನ್ ಯಾಕಮ್ಮ ಕಳಿಸ್ಕೊಟ್ಟೆ?’

‘ಹೋಗ್ತೀನಿ ಅಂತ ಹೇಳ್ದಾಗ ಬೇಡ ಅನ್ನಾಕಾಗುತ್ತ?’

‘ಅನ್‌ಬೇಕು. ಹೀಗೆ ನನ್ನ ಹೇಳ್ದೆ ಕೇಳ್ದೆ ಹೋಗೋದು ನಂಗಿಷ್ಟ ಆಗಲ್ಲ.’

‘ಯಾವಾಗ್ಲೂ ನಿನ್ ಕೇಳಿ ಹೋಗೋಕ್ ಆಗುತ್ತ? ನನ್ ಕೇಳಿ ಹೋಗಿದಾಳಲ್ಲ?’

‘ಗೆಳತಿ ಮನೇಗೇ ತಾನೆ ಹೋಗಿರೋದು?’

‘ಆಕೆ ಹೇಳಿದ್ದು ಗೆಳತಿ ಮನೇಗೇ ಅಂತ. ಅಲ್ಲಿಗೇ ಹೋಗಿರ್ತಾಳೆ.’

‘ಅಲ್ಲಿಗೇ ಹೋಗಿರ್ತಾಳೆ ಅಂತ ಏನ್ ಗ್ಯಾರಂಟಿ?’

‘ಹೀಗೆಲ್ಲ ಯಾಕ್ ಅನುಮಾನ ಪಡ್ತೀಯ? ಸ್ವಲ್ಪಾನು ಸರಿಯಲ್ಲ.’

‘ಸರಿಯೊ ತಪ್ಪೊ ಅಂತ ನಂಗೂ ಗೊತ್ತಾಗುತ್ತೆ.’

‘ನಿನಗೆಲ್ಲೊ ಅನುಮಾನದ ಭೂತ ಹೊಕ್ಕಂಗಿದೆ.

–ಎಂದು ಪುತಳಿಬಾಯಿ ಮುನಿಸಿನಿಂದ ಹೋದರು. ಗಾಂಧಿ ಚಡಪಡಿಸತೊಡಗಿದರು. ಅರೆ! ಅಮ್ಮನ ಜೊತೆ ತಾನು ಇಷ್ಟೆಲ್ಲ ವಾದ ಮಾಡಬೇಕಿತ್ತೆ ಎಂದು ಕೇಳಿಕೊಂಡರು. ಆಗ ಮಿತ್ರ ಶೇಖ್ ಮೆಹ್ತಾಬ್ ನೆನಪಿಗೆ ಬಂದ.

ಶೇಖ್ ಮೆಹ್ತಾಬ್ ಮತ್ತು ಗಾಂಧಿ ಆತ್ಮೀಯ ಗೆಳೆಯರು. ಆತ ಆಗಾಗ್ಗೆ ಗಾಂಧಿಗೆ ಗುಮಾನಿ ಹುಟ್ಟಿಸುವ ಮಾತುಗಳನ್ನು ಆಡುತ್ತಿದ್ದ.

‘ಏನ್ ಗಾಂಧಿ, ಹೇಗಿದೆ ಸಂಸಾರ?’

‘ಚೆನ್ನಾಗಿದೆ ಮೆಹ್ತಾಬ್.’

‘ನಿನ್ ಹೆಂಡ್ತೀನೂ ಚೆನ್ನಾಗಿದಾಳಪ್ಪ.’

‘ಹೌದು ಮತ್ತೆ, ಚೆನ್ನಾಗಿದಾಳೆ!’

‘ಚೆನ್ನಾಗ್ ಇದ್ರೆ ಸಾಲ್ದು, ಚೆನ್ನಾಗ್ ನಡ್ಕೊಳ್ತಾಳೆ ತಾನೆ?’

‘ಯಾಕ್ ಹೀಗೆಲ್ಲ ಕೇಳ್ತಿದ್ದೀಯ?’

‘ಯಾಕೂ ಇಲ್ಲ, ಮೊನ್ನೆ ಒಬ್ಬಳೇ ಯಾರ್ದೊ ಮನೇಗ್ ಹೋಗ್ತಿರೋದ್ ನೋಡ್ದೆ, ಒಬ್ಬೊಬ್ಬಳನ್ನೇ ಯಾಕ್ ಹೊರಗಡೆ ಬಿಡ್ತೀಯ?’

ಗಾಂಧಿಗೆ ಏನು ಹೇಳಬೇಕೆಂದು ತೋಚದೆ, ಕಸ್ತೂರ್ ಯಾಕೆ ಹೀಗೆ ಮಾಡುತ್ತಾಳೆಂದು ಯೋಚಿಸತೊಡಗಿದರು.

‘ತಪ್ ತಿಳ್ಕೋಬೇಡ ಗಾಂಧಿ: ಸ್ನೇಹಿತ ಅಲ್ವಾ, ಅದಕ್ ಒಂದ್ ಕಿವಿ ಮಾತ್ ಹೇಳ್ದೆ’ ಎಂದು ಶೇಖ್ ಮೆಹ್ತಾಬ್ ಹುಳ ಬಿಟ್ಟು ಹೋಗಿದ್ದ.

ಆ ನೆನಪಿನಲ್ಲಿ ಗಾಂಧಿ ತಳಮಳಿಸುತ್ತ ಕೂತರು. ಸ್ವಲ್ಪ ಕತ್ತಲಾದ ಮೇಲೆ ಕಸ್ತೂರ್ ಬಂದರು. ಗಾಂಧಿಗೆ ತನ್ನ ತಾಪವನ್ನು ಕೋಪದಲ್ಲಿ ಕಾರಿಕೊಳ್ಳಬೇಕಿತ್ತು.

‘ಇಷ್ಟುಹೊತ್ತು ಎಲ್ ಹೋಗಿದ್ದೆ?’

‘ಗೆಳತಿ ಮನೇಗ್ ಹೋಗಿದ್ದೆ.’

‘ಯಾರ್ನ ಕೇಳ್ ಹೋಗಿದ್ದೆ?’

‘ಅತ್ತೇನ್ ಕೇಳ್ ಹೋಗಿದ್ದೆ.’

‘ನಾನಿನ್ನೂ ಬದ್ಕಿದ್ದೀನಿ.’

‘ನಾನೂ ಬದ್ಕಿದ್ದೀನಿ. ಬದುಕ್‌ಬೇಕು ಅಂತ ಇದ್ದೀನಿ.’

‘ಬರೀ ಬದ್ಕೋದಲ್ಲ. ಸರ್ಯಾಗ್ ಬದುಕ್‌ಬೇಕು. ನನ್ನನ್ ಕೇಳ್ದೆ ಎಲ್ಲೂ ಹೋಗ್‌ಬಾರ್ದು.’

‘ಅತ್ತೆ ನಿಮ್ಮನ್ ಹೆತ್ತೋರು. ಅವ್ರಿಗಿಂತ ದೊಡ್ಡೋರ ನೀವು?’

‘ಇಲ್ಲಿ ದೊಡ್ಡೋರು ಚಿಕ್ಕೋರು ಅನ್ನೋ ಪ್ರಶ್ನೆ ಇಲ್ಲ. ನಾನು ಗಂಡ.’

ಕಸ್ತೂರ್‌ಗೆ ಕಸಿವಿಸಿಯಾಯಿತು. ಇವರು ಯಾಕೆ ಹೀಗೆ ಆಡುತ್ತಿದ್ದಾರೆ ಎಂಬ ವ್ಯಾಕುಲತೆ ಕಾಡಿತು. ‘ಅಲ್ಲ. ನಾನೇನ್